ವಿಚಾರವಿದೆ. ನಾನು ನೋಡಿದಂತೆ ಕುರಿ ಹುಲ್ಲುಜಾತಿಯ ಸಸ್ಯಗಳನ್ನು ಅವಲಂಬಿಸಿದ ಪ್ರಾಣಿ. ಮರದ ಜಾತಿಯ ಎಲೆಗಳಿಂದಾವೃತವಾದ ತೋರಣವನ್ನು ತಿನ್ನುವುದನ್ನು ಕಾಣೆ. ಪದವಿ ಓದುವಾಗ ಮನೆಯಲ್ಲಿ ಆಡು ಸಾಕಿದ್ದೆವು. ಅವುಗಳಲ್ಲಿ ಒಂದು ಆಡು ನಮ್ಮ ಮನೆಮಂದಿಗೆಲ್ಲ ಬಲುಪ್ರಿಯವಾಗಿತ್ತು. 'ಪಾತುಮ್ಮಳ ಆಡಿ'ನಂತೆ. ಕರಿಯಬಿಳಿಯ ಚುಕ್ಕಿಗಳಿದ್ದ ಆ ಆಡಿಗೆ 'ಜಾಲಾಡು' ಎಂದು ನಾಮಕರಣ ಮಾಡಿದ್ದೆವು. ಈ ಜಾಲಿಬಣ್ಣದಲ್ಲಿ ಬೇರೆ ಬೇರೆ ಬಗೆಗಳುಂಟು. ಮೈಮೇಲೆ ಕೆಂಪು ಚುಕ್ಕಿಗಳು ಹೆಚ್ಚಿದ್ದರೆ ಕೆಂಜಾಲಿ. ಬಿಳಿ ಚುಕ್ಕಿಗಳು ಹೆಚ್ಚಿದ್ದರೆ ಬಿಳಿಜಾಲಿ. ಕರಿಚುಕ್ಕಿಗಳು ಹೆಚ್ಚಿದ್ದರೆ ಕರಿಜಾಲಿ ಹೀಗೆ. ಕರಿಯಬಿಳಿಯ ಚುಕ್ಕಿಗಳನ್ನು ಸಮಪ್ರಮಾಣದಲ್ಲಿ ಧರಿಸಿದ್ದರೆ 'ಜಾಲಿ'ಯಷ್ಟೆ. ನಮ್ಮ ಆ ಆಡಿನಲ್ಲಿ ಕಪ್ಪುಬಿಳುಪಿನ ಚುಕ್ಕಿಗಳು ಸಮಪ್ರಮಾಣದಲ್ಲಿದ್ದುದರಿಂದ ನಮ್ಮದು 'ಜಾಲಾಡು'. ಅದು ಆರು ತಿಂಗಳಿಗೆ ಎರಡರಂತೆ ವರ್ಷಕ್ಕೆ ನಾಲ್ಕು ಮರಿಗಳನ್ನು ಈಯುತ್ತಿತ್ತು. ತನ್ನ ಎರಡು ಮರಿಗಳಿಗೆ ಹೊಟ್ಟೆ ತುಂಬಾ ಹಾಲು ಕುಡಿಸಿ, ಇನ್ನೂ ಅರ್ಧ ಲೀಟರ್ ಹಾಲನ್ನು ನಮಗೆ ಕೊಡುತ್ತಿತ್ತು. ಆಗಿನ ಕಾಲದ ನಮ್ಮ ಸಾಕ್ಷಾತ್ ಲಕ್ಷ್ಮಿಯಾಗಿದ್ದ 'ಜಾಲಿ' ಈ ಕಾರಣಕ್ಕೆ ನಮ್ಮ ಮನೆಮಂದಿಗೆಲ್ಲ ಇಷ್ಟದೇವತೆಯಾಗಿದ್ದಳು.

ಮಹಾತ್ಮ ಗಾಂಧೀಜಿ ಆಡಿನ ಹಾಲನ್ನು ಕುಡಿಯುತ್ತಿದ್ದರು. ನನ್ನ ಬಿ.ಎಡ್ ಓದು ಮುಗಿಯುವವರೆಗೂ ನಮ್ಮ ಚಿಕ್ಕಪ್ಪನ ಜೊತೆಯಲ್ಲಿ ಆಡು ಕಾಯಲು ಗುಡ್ಡ ತಿರುಗುತ್ತಿದ್ದ ನಾನು 'ಕಲ್ಲಿ'ಯಲ್ಲಿದ್ದ ನೀರು ಖಾಲಿಯಾಗುತ್ತಲೇ ಜಾಲಿಯ ಕೆಚ್ಚಲಿಗೆ ಬಾಯಾಕುತ್ತಿದ್ದೆ. ಹಾಗಾಗಿ ನನ್ನ ಪಾಲಿಗೆ 'ಜಾಲಿ' ಸಮಗಾರ ಭೀಮವ್ವ. ಈ ಜಾಲಿ ನಮ್ಮ ತೋರಣವನ್ನು ಭಂಗುರಪಡಿಸುವಾಗ ಯಾವಾಗಲೂ ತನ್ನ ಎರಡು ಮುಂಗಾಲುಗಳನ್ನು ಬೇವಿನ ಹಲಗೆಯಿಂದಾದ ಕದವೆಂಬ ಡೋರಿನ ಮೇಲೆ ಅಡ್ಡುಗಾಲು ಚಾಚಿ ಬೇವಿನ ಸೊಪ್ಪನ್ನು ಅರೆಕ್ಷಣದಲ್ಲಿ ಹರಿದುಬಿಡುತ್ತಿದ್ದಳು. ಒಂದು ದಿನ ನಮ್ಮ 'ಜಾಲಿ' ಇದ್ದಕ್ಕಿದ್ದ ಹಾಗೆಯೆ ಕೊಟ್ಟಿಗೆಯಿಂದ ಕಣ್ಮರೆಯಾದಳು. ನಾವೆಲ್ಲ ಸೂತಕದ ಮನೆಯಲ್ಲಿ ತಿಂಗಳುಗಟ್ಟಲೆ ರೋದಿಸಿದೆವು. ಕೆಲವರು ನಿಮ್ಮ ಆಡನ್ನು ಸಖರಾಯಪಟ್ಟಣದ ಮರಿಸಂತೆಯಲ್ಲಿ ಮಾರಾಟವಾಗುತ್ತಿದ್ದುದನ್ನು ನೋಡಿದೆವೆಂದೂ, ಇನ್ನೂ ಕೆಲವರು ನಮ್ಮ ಹೊಲದಲ್ಲಿ ಆ ಆಡಿನ ಚರ್ಮ ಇತ್ತೆಂದೂ, ಮತ್ತೆ ಕೆಲವರು ಗುಡ್ಡದಲ್ಲಿ ಅದರ ಚರ್ಮದ ಕುರುಹುಗಳನ್ನು ಕಂಡೆವೆಂದೂ ಅಪ್ಪನಿಗೆ ವಾರ್ತೆ ಮುಟ್ಟಿಸುತ್ತಿದ್ದರು. ಎಲ್ಲಿ ಹೋದಳೋ, ಏನಾದಳೋ ಮನುಷ್ಯನೊಳಗೊಂಡಂತೆ ಯಾವ ಪ್ರಾಣಿಯ ಬಾಯಿಗೆ ಈಡಾದಳೋ ಇಂದಿಗೂ ಆಕೆಯ ಕಣ್ಮರೆ ಚಿದಂಬರ ರಹಸ್ಯವೇ ಆಗಿದೆ. ಒಡಲಾಳದಲ್ಲಿ ಕೋಳಿ ಕಳೆದುಕೊಂಡ ಸಾಕಮ್ಮಳಿಗೆ ಅಪಾಟ ಯಾತನೆಯಾಗಿರುವಾಗ ಆಡು ಕಳೆದುಕೊಂಡು ಸುತ್ತಲಿನ ಊರುಗಳನ್ನೆಲ್ಲ ಎಡತಾಕಿ ಬರಿಗೈಯ್ಯಲ್ಲಿ ಬಂದ ಅಪ್ಪನ ನೋವು ಯಾವ ಬಗೆಯದ್ದಾಗಿರಬಹುದು?

ನಮ್ಮ ಚಿಕ್ಕಪ್ಪನ ಜೊತೆಯಲ್ಲಿ ಆಡು ಕಾಯಲು ಹೋಗುತ್ತಿದ್ದೆ ಎಂದೆ. ಈ ಅನುಭವದ ಆಧಾರದ ಮೇಲೆ ಹೇಳುವುದಾದರೆ ಕುರಿ ಕಾಯುವುದು ಸುಲಭ. ಬಿರು ಬೇಸಿಗೆಯಲ್ಲಿ ಆಡು ಕಾಯುವುದು ಸವಾಲು. ಎಲ್ಲ ಗಿಡಮರಗಳು ಒಣಗಿ ವಾಟೆಗರಿಯಾಗಿರುತ್ತವೆ. ಗಿಡದಲ್ಲೊಂದು ಎಲೆ ತಿಂದು ಮುಂದಿನ ಗಿಡಕ್ಕೆ ತುಡಿವ ಆಡಿನ ಜಾತಿಯನ್ನು ಕಂಡೇ 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ನಾಣ್ಣುಡಿ ಹುಟ್ಟಿದೆ. ಇಂತಹ ಸಂದರ್ಭದಲ್ಲಿ ಆಡು ಕಾಯುವವರ ಆಸರೆಗೆ ಬರುತ್ತಿದ್ದುದು ಬೇವು. ನಮ್ಮ ಬಯಲುನಾಡಿನಲ್ಲಿ ಈಗಲೂ ಬೇವಿನ ಮರಗಳು ನಿಬಿಡ. ಒಂದು ದೊಡ್ಡ ಬೇವಿನ ಮರದ ಸುಳಿ ವಿನಃ ಎಲ್ಲ ಕೊಂಬೆಗಳನ್ನು ಕಡಿದರೆ ಅಂದು ಎಲ್ಲ ಆಡುಗಳು ಸುಮ್ಮನಾದಂತೆ. ಮುಂದಿನ ಯುಗಾದಿಗೆ ಅದೇ ಬೇವಿನಮರ ಮತ್ತಷ್ಟು ಸೊಂಪಾಗಿ ಬೆಳೆದು ನಿಂತು 'ಬಾ' ಎಂದು ಆಡು ಕಾಯುವ ಹುಡುಗರಿಗೆ ಆಹ್ವಾನವೀಯುತ್ತದೆ. ನರನ ನಾಲಗೆ ಕಹಿ ಎಂದು ವರ್ಜಿಸುವ ಬೇವನ್ನು ಆಡುಗಳು ಬಯಸಿ ತಿನ್ನುತ್ತವೆ. ಈ ಪ್ರತ್ಯಕ್ಷಪ್ರಮಾಣದ ಮೇಲೆ ಹೇಳುವುದಾದರೆ ಬಸವಣ್ಣನವರ ವಚನದಲ್ಲಿ ತೋರಣ ತಿಂದಿರುವುದು ಆಡು. ಕುರಿಯಲ್ಲ. ಕೆಲವು ಪ್ರದೇಶಗಳಲ್ಲಿ ಆಡನ್ನೂ ಕುರಿಯೆಂದೇ ಬಗೆದು ಮಾತನಾಡುವ ವಾಡಿಕೆಯಿದೆ. ಆದರೆ ಅವೆರಡರ ಜೀವನವಿಧಾನದಲ್ಲಿ ಗುರುತರವಾದ ಅಂತರಗಳಿವೆ.

ಅಪ್ಪ ಸಾಗುವಳಿ ಮಾಡುವಾಗ ಹೊಲದ ಸುತ್ತಲಿರುವ ಬದುಗಳಲ್ಲಿನ ಗಿಡಗಳನ್ನು ಕಡಿಯುತ್ತಿದ್ದ. ಜಾಲಿ, ತಬಸಿ ಮುಂತಾದ ಗಿಡಗಳನ್ನು ಮುಲಾಜಿಲ್ಲದೆ